**O.S. No. 04/2020 ಪಿ ಡಬ್ಲ್ಯು2**

ದಿನಾಂಕಃ **17.06.2023**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು.

<u>ಪಾಟೀ ಸವಾಲು **1** ರಿಂದ **4** ನೇ ಪ್ರತಿವಾದಿಯರ ಪರವಾಗಿ ಶ್ರೀ ಜಿ.ಎಂ.ಎಸ್ ವಕೀಲರಿಂದಃ-</u>

ನಾನು 2 ನೇ ಪಿಯುಸಿ ವರೆಗೆ ಓದಿದ್ದೇನೆ. ನಾನು 1971 ರಲ್ಲಿ ನಾನು ಜನಿಸಿದೆ. ನನಗೆ ನಿರ್ಧಿಷ್ಟವಾಗಿ ದಿನಾಂಕ ಹೇಳಲು ಬರುವುದಿಲ್ಲ. ನಾನು ಚೇರ್ಮನ್ ಆಗಿದ್ದಾಗ ಯಾರಿಗೆಲ್ಲಾ ಹಕ್ಕು ಪತ್ರಗಳನ್ನು ಕೊಟ್ಟಿದ್ದೇನೆ ಎಂದು ಹೇಳಲಾಗುವುದಿಲ್ಲ. ನನ್ನ ಹಿಂದೆ ಅಂದರೆ ನಾನು ಚೇರ್ಮನ್ ಆಗುವ ಮೊದಲು ಏನೆಲ್ಲಾ ಪಂಚಾಯ್ತಿಯ ನಡವಳಿಗಳು ಆದವು ಎಂಬ ಬಗ್ಗೆ ಮಾಹಿತಿ ಇದೆ. 1980 ರಲ್ಲಿ ನಡೆದ ನಡವಳಿಗಳ ಬಗ್ಗೆ ನನಗೆ ಹೇಳಲಿಕ್ಕಾಗುವುದಿಲ್ಲ.

ಈಗ ನಾನು ಚೇರ್ಮನ್ ಆಗಿಲ್ಲ. ಪಂಚಾಯ್ತಿಯವರು ದಾಖಲೆಗಳನ್ನು ಪರಿಶೀಲನೆ ಮಾಡಿ 5 ನೇ ಪ್ರತಿವಾದಿಗೆ ಹಕ್ಕು ಪತ್ರವನ್ನು ನೀಡಿದ್ದಾರೆ ಎಂದರೆ ಸಾಕ್ಷಿ ಗ್ರಾಮ ಪಂಚಾಯ್ತಿಗೆ ಹಕ್ಕು ಪತ್ರ ಕೊಡುವ ಅಧಿಕಾರವಿಲ್ಲ ಎನ್ನುತ್ತಾರೆ. ವಾದಿಯರು ನನ್ನ ಸ್ನೇಹಿತರಾಗಿರುವುದರಿಂದ ಅವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 5 ನೇ ಪ್ರತಿವಾದಿಗೆ ಕೊಟ್ಟ ಆಸ್ತಿಯ ಅಳತೆಗಳು ಸರಿ ಇದೆ ಎಂದರೆ ಸರಿಯಲ್ಲ. ಚೇರ್ಮನ್ ವಿರೂಪಾಕ್ಷಪ್ಪನವರು ಯಾವ ಯಾವ ಸಂದರ್ಭದಲ್ಲಿ ಹೇಗೆ ಹೇಗೆ ಸಹಿಗಳನ್ನು ಮಾಡುತ್ತಾರೆ ಎಂಬ ಬಗ್ಗೆ ಗೊತ್ತಿದೆ. ವಾದಿ ನನ್ನ ಸ್ನೇಹಿತ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> **5** ನೇ ಪ್ರತಿವಾದಿಯ ಪರ ಶ್ರೀ ಕೆ.ಎನ್.ಎಸ್ ವಕೀಲರಿಂದಃ

ನಾನು ಚೇರ್ಮನ್ ಆಗಿದ್ದೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ. ಸರ್ವೆ ನಂಬರ್ 270 ಮತ್ತು 271 ಬಿಳಕಿ ಗ್ರಾಮದ ಪಹಣಿಗಳನ್ನು ನಾನು ನೋಡಿದ್ದೇನೆ. 1971 ರ ಹಿಂದೆ ಸರ್ವೆ ನಂಬರ್ 270 ರಲ್ಲಿ 1 ಎಕರೆ ಇತ್ತು. ನಮ್ಮ ಪಂಚಾಯ್ತಿಯಲ್ಲಿ ಏನೆಲ್ಲಾ ವ್ಯವಹಾರಗಳಾಗಿವೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸರಿ ಇವೆ. 100*100 ಅಡಿಗೆ 1969 ರಲ್ಲಿ ಹಕ್ಕು ಪತ್ರ ಕೊಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. 1969 ರಲ್ಲಿ ಯಾರು ಚೇರ್ಮನ್ ಆಗಿದ್ದರು ಎಂಬುದು ನನಗೆ ಗೊತ್ತಿಲ್ಲ. ನಾನು ಹಕ್ಕು ಪತ್ರವನ್ನು ನೋಡಿದ್ದೇನೆ. ನಾನು ಪಂಚಾಯಿತಿಯಲ್ಲಿದ್ದ ಹಕ್ಕು ಪತ್ರವನ್ನು ನೋಡಿದ್ದೇನೆ. ಸೊಸೈಟಿಯವರು ಹಕ್ಕು ಪತ್ರವನ್ನು ಕೊಟ್ಟಿದ್ದು ದಿಃ 15.10.1971 ರಲ್ಲಿ ಎನ್ನುವುದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 271 ರಲ್ಲಿ 1 ಎಕರೆ ಇದ್ದಿದ್ದು, ಅದನ್ನು ಸ್ವಾಧೀನಪಡಿಸಿಕೊಂಡು ಪರಿಹಾರವನ್ನು ಕೊಟ್ಟರು ಎನ್ನುವುದು ಗೊತ್ತಿಲ್ಲ. ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ 270 ನೇ ಸರ್ವೆ ನಂಬರ್ ನಲ್ಲಿ ಯಾವುದೇ ಆಸ್ತಿ ಇಲ್ಲ ಎನ್ನುವುದು ಸರಿಯಲ್ಲ.

ವಾದಿಯರು ರೆವಿನ್ಯೂ ಇಲಾಖೆಯಲ್ಲಿ ಇದ್ದರು, ಈಗ ಅವರು ನಿವೃತ್ತಿ ಹೊಂದಿದ್ದಾರೆ ಎನ್ನುವುದು ಸರಿ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಜೇಂದ್ರ ರವರ ಜಮೀನಿನಲ್ಲಿ ಮನೆ ಕಟ್ಟಿದ್ದೇನೆ ಎಂದರೆ ಸರಿ, ಆದುದರಿಂದ ನಾನು ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.

ಓ ಹೇ ಕೇ ಸ ಇದೆ.

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶಿಕಾರಿಪುರ.